**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

ಸಿಸಿ ನಂಃ **15/2020**

| | | |
|---|---|---|
| ಹೆಸರು | ಹರ್ಷ | ಸಿ.ಡಬ್ಲ್ಯೂ **- 5** |
| ತಂದೆಯ ಹೆಸರು | ಶ್ರೀನಿವಾಸ ಗೌಡ | ಪಿ.ಡಬ್ಲ್ಯೂ **- 4** |
| ವಯಸ್ಸು | 30 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ ಸ್ಥಳ | ಅಂಬರಹಳ್ಳಿ | |

ಸಾಕ್ಷಿಗೆ ದಿನಾಂಕಃ 02.04.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಎ ಪಿ ಪಿ ರರಿಂದ ಃ

ದಿ: 13.09.2019 ರಂದು ಈಗ ನೋಡುತ್ತಿರುವ ನಿಪಿ 8 ಕ್ಕೆ ನೆಲಮಾಕನಹಳ್ಳಿ ಗ್ರಾಮದಲ್ಲಿ ಮಾದೇಗೌಢರವರಿಗೆ ಅಪಘಾತವಾಗಿದ್ದ ಸಂಬಂಧವಾಗಿ ಸ್ಥಳ ಮಹಜರ್‌ಗೆ ಬಂದಿದ್ದಾಗ ಸಹಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ 8 ಬಿ ಎಂದು ಗುರುತಿಸಲಾಯಿತು. ಸದರಿ ಕಾಲಕ್ಕೆ ಚಾಸಾ 1 ಮತ್ತು 3 ನನ್ನ ಜೊತೆ ಇದ್ದರು. ಸಂಜೆ 4 ರಿಂದ 4-30 ರ ಅವಧಿಯಲ್ಲಿ ಮಹಜರ್ ಮಾಡಿರುತ್ತಾರೆ. ಸದರಿ ಕಾಲಕ್ಕೆ ಈಗ ನೋಡುತ್ತಿರುವ ನಿಪಿ 4 ರಿಂದ 6 ಫೋಟೋಗಳನ್ನು ತೆಗೆಸಿರುತ್ತಾರೆ. ಸದರಿ ಕಾಲಕ್ಕೆ ಬೈಕ್ ಮತ್ತು ಬುಲೇರೊ ವಾಹನವನ್ನು ತೆಗೆದುಕೊಂಡಿರುತ್ತಾರೆ. ಸದರಿ ವಾಹನಗಳು ಈಗ ನೋಡುತ್ತಿರುವ ನಿಪಿ 1 ರಿಂದ 6 ಫೋಟೋಗಳಲ್ಲಿ ಕಾಣಿಸುತ್ತದೆ.

ಪಾಟೀ ಸವಾಲು ಃಆರೋಪಿ ಪರ: ಶ್ರೀ. ಎಂ.ಎನ್‌ಆರ್. ವಕೀಲರಿಂದ

ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ನನಗೆ ನೋಟೀಸ್ ನೀಡಿರಲಿಲ್ಲ. ಮಹಜರ್ ಗೆ ಬರುವಂತೆ ಪೊಲೀಸರು ಹೇಳಿರುತ್ತಾರೆ. ನಿಪಿ 8 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ಮೃತ ಮಾದೇಗೌಡರವರು ನನಗೆ ತಾತನಾಗಬೇಕು. ನಿಪಿ 8 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಸಂಬಂಧವಾಗಿ ಪರಿಹಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಪರಿಹಾರ ಬರಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.